ಅಂಗಿ ಚಡ್ಡಿ ಹಾಕಿಕೊಂಡು, ಗೊಣ್ಣೆ ಸುರಿಯುವ ಮೂಗು ಒರೆಸಿಕೊಂಡು ನೀಟಾಗಿ ಬರಬೇಕು. 'ಗೊತ್ತಾಯಿತೇನ್ರೋ...' ಎಂದು ಹೇಳಿ ರಪ್ ಎಂದು ಬೆತ್ತದಿಂದ ಮೇಜಿಗೆ ಬಡಿದರು. ಆ ದಿನ ಚಕ್ಕರ್ ಹೊಡೆದರೆ ಗೊತ್ತಲ್ಲ ಪೂಜೆ... ಎಂದು ಪಿಳ್ಳೆಯನ್ನ ದುರುಗಟ್ಟಿ ನೋಡಿದರು ಮಾಸ್ತರು. 'ಏ ಪಿಳ್ಳೆ, ದಡ್ಡ ಮುಂಡೇದೆ, ನೀನು ಕಡೇ ಬೆಂಚಲ್ಲಿ ದಾಸೇಗೌಡನ ಪಕ್ಕದಲ್ಲಿ ಕೂತ್ಕೋ' ಎಂದು ಆಜ್ಞೆ ಹೊರಡಿಸಿದರು.

ಲೆಕ್ಕ, ಮಗ್ಗಿ, ಪಾಠ... ಎಲ್ಲಾ ಕಲಿತವರು ಚುರುಕಾದವರು. ಮುಂದಿನ ಬೆಂಚಲ್ಲಿ ಕುಳಿತರು. ಎಂದಿನಂತೆ ಪಿಳ್ಳೆ ಬಾಯಿ ಅಲ್ಲಾಡಿಸುತ್ತಿದ್ದ. ಮಾಸ್ತರು ಅವನ ಕಡೆಗೆ ನೋಡಿದರು. ಅವನು ತನ್ನನ್ನು ಅಣಕಿಸುತ್ತಿದ್ದಾನೆ ಎನ್ನಿಸಿ, 'ಏನು ತಿಂತಿದೀ ಬೊಗಳೋ' ಎಂದು ಚುಳುಕೆಯಿಂದ ಬಾರಿಸಿದರು. ಆಗ ತಾನೇ ಪಿಳ್ಳೆ ಪಕ್ಕದವನ ಕಿವಿಯಲ್ಲಿ ಜಾಮೂನು ತಿಂತ್ತಿದ್ದೆ ಸುಮ್ ಸಮ್ನೆ... ಎಂದು ಪಿಸುಗುಟ್ಟಿದ್ದ. ಅ ಪಕ್ಕದ ಹುಡುಗ, 'ಏನಿಲ್ಲಾ ಸರ್... ಪಿಳ್ಳೆ ಸುಮ್ ಸುಮ್ನೆ ಆಗಾಗ ಮೈಸೂರ್ ಪಾಕ್, ಜಾಮೂನು, ಲಾಡು ಉಂಡೆ... ಏನುಬೇಕೋ ಅದನ್ನ ತಿಂತಾನೆ...' ಎಂದು ಹೇಳಿದ. ಮಾಸ್ತರು, 'ಏ ಪಿಳ್ಳೆ ಬಾರೋ ಇಲ್ಲಿ. ಬಾ. ನಾನು ನಿನ್ಗೆ ಕಾಯಿ ಮಿಠಾಯಿ ಕೊಡುತ್ತೀನಿ' ಎಂದು ಪಿಳ್ಳೆಯನ್ನ ಕರೆದು ಎದುರಿಗೆ ನಿಲ್ಲಿಸಿಕೊಂಡು, ಚುಳುಕೆಯಿಂದ ಅವನ ಪುಟ್ಟ ಕೈಯನ್ನು ಅಗಲಿಸುವಂತೆ ಮಾಡಿ, ಬಾರಿಸಲು ಚುಳುಕೆ ಎತ್ತಿದ್ದರು. ಆಗ ಪಿಳ್ಳೆ ಕೈ ಹಿಂದೆ ಸರಿಸಿಕೊಂಡ. ಆ ಏಟು ಮಾಸ್ತರರಿಗೆ ಬಿದ್ದು ಚುಳುಕೆ ಇನ್ನಷ್ಟು ಕೆರಳಿತು.

ಪಿಳ್ಳೆ ನನ್ನ ಆಪ್ತಗೆಳೆಯನಾಗಿದ್ದ. ಕೆಲಸಾರಿ ಚಾಳಿ (ಸಂಗ) ಬಿಟ್ಟು ಮೂರುನಾಲ್ಕು ದಿನ ಮಾತುಗೀತು ಏನೂ ಇರುತ್ತಿರಲಿಲ್ಲ. ಇಬ್ಬರ ನಡುವೆ ದೊಡ್ಡದೊಂದು ಮೌನ ಗೋಡೆ. ಕೆಲಸಾರಿ ಬಳಪ, ಗುಲಗಂಜಿ, ಮುಂತಾದವುಗಳನ್ನ ಕೊಟ್ಟು ಚಾಳಿ ಕಟ್ಟಬೇಕಾಗುತ್ತಿತ್ತು. ನಿಂತುಹೋದ ಮಾತುಕತೆಗಳು, ಗುಟ್ಟುಗಳು, ಗುರುರಾಜ ಮಾಸ್ತರು ಶಾಲಿನಿ ಮೇಡಂ 'ಲೌ' ಮಾಡುತ್ತಿದ್ದುದು ಏನೆಲ್ಲಾ ಮುಗಿಯದ ಮಾತುಗಳು. ಬೆಳ್ಳಕ್ಕಿಗಳು ಹಗಲನ್ನು ಕೊಂಡೊಯ್ದು, ಕಾಗೆಗಳು ರಾತ್ರಿಯನ್ನ ರೆಕ್ಕೆಯಿಂದ ತಂದು ನೆಲಕ್ಕೆ ಇಳಿಸಿದರೂ. ನಮ್ಮ ನಡುವಿನ ಮಾತುಕತೆಗಳು ಮುಗಿಯುತ್ತಿರಲಿಲ್ಲ.

ಶಾಲೆಯಲ್ಲಿ ಆತನ ಹಸಿವು ದಿನೇ ದಿನೇ ಏರುತ್ತ



ಹೋಯಿತು. ಆಗ ಆಗಸದಲ್ಲಿ ಗುಡುಗು, ಮಿಂಚುಗಳು, ಆರ್ಭಟಿಸುತ್ತಿದ್ದವು. ಪಿಳ್ಳೆ ಆಗಾಗ ಹರಕು ಅಂಗಿಯ ಜೇಬಲ್ಲಿ ಬೆರಳು ಹಾಕಿಕೊಂಡು ಅದರ ತುದಿಯನ್ನು ಅಲ್ಲಾಡಿಸುತ್ತಿದ್ದಾಗ ಅದನ್ನ ನೋಡಿ ನನಗೆ ಬುಟ್ಟಿಯಿಂದ ಚೂರೇ ತಲೆ ಹೊರಹಾಕಿದ ಹಾವು ಕಾಣಿಸಿದಂತಾಗಿ ನಗು ಬರುತ್ತಿತ್ತು. ಆಗ ಪಿಳ್ಳೆ ಆ ನಗುವನ್ನೇ ತಿನ್ನುತ್ತಿದ್ದ. ಈಗ ನಾನು ಬತ್ತಾಸು ತಿಂದೆ ಎಂದು ಬಾಯಿ ಅಲ್ಲಾಡಿಸುತ್ತಿದ್ದ.

3

ಇನ್‌ಸ್ಪೆಕ್ಟರ್ ಬಂದರು. ಅವರ ಕಣ್ಣೆಲ್ಲ ಹಿಂದಿನ ಸಾಲಿನ ಹುಡುಗರ ಮೇಲೆ! ಪಿಳ್ಳೆ, ನನ್ನನ್ನು ಇವತ್ತು ಇನ್‌ಸ್ಪೆಕ್ಟರ್ ಏನೂ ಕೇಳದಿರಲಿ ಎಂದು ದುಗ್ಗಮ್ಮ ದೇವರಲ್ಲಿ ಬೇಡಿಕೊಂಡಿದ್ದ. ಆ ಬೇಡಿಕೆ ದುಗ್ಗಮ್ಮ ದೇವರ ಕಿವಿಗೆ ಬಿದ್ದಿರಲಿಲ್ಲ. ಹೀಗಾಗಿ ಇನ್‌ಸ್ಪೆಕ್ಟರ್, 'ನೀನು ನಾಲ್ಕನೆ ಮಗ್ಗಿ ಹೇಳೋ' ಎಂದು ಪಿಳ್ಳೆಯನ್ನು ಕೇಳಿದರು. ಅವನ ಗಂಟಲಿನಿಂದ ಮಾತೇ ಹೊರಡಲಿಲ್ಲ. ಹಸಿವೆ. ಹಸಿವೆ. ಮತ್ತು ಕೇವಲ ಹಸಿವೆ.

ಪಿಳ್ಳೆ ಮಗ್ಗಿ ತಪ್ಪಿದ. ಪದ್ಯ ಹೇಳುವುದನ್ನು ತಪ್ಪಿದ. ಉತ್ತರ ಹೇಳುವುದನ್ನೂ ತಪ್ಪಿದ. ಇನ್‌ಸ್ಪೆಕ್ಟರ್ ಹೋದ ನಂತರ ಮಾಸ್ತರ ಹೊಡೆತ ತಪ್ಪಲಿಲ್ಲ. ಹೊಡೆತದ ಮೇಲೆ ಹೊಡೆತಗಳು. ಪಿಳ್ಳೆ ಮಾರನೇ ದಿನದಿಂದ ಶಾಲೆಗೆ ಬರಲಿಲ್ಲ.

ಅವನ ನವಿಲು ಗರಿ ನನ್ನ ಪುಸ್ತಕದಲ್ಲಿ ಉಳಿಯಿತು.

●